ಸಾಹಿತ್ಯ ವಿಮರ್ಶಕರಾಗಿ ಗುರುತಿಸಿಕೊಂಡ ಎಸ್.ಸಿರಾಜ್ ಅಹಮದ್ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳೆರಡರಲ್ಲಿಯೂ ಬರವಣಿಗೆ ಮಾಡುತ್ತಾರೆ. ಕುವೆಂಪು ವಿಶ್ವವಿದ್ಯಾಲಯದ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಪ್ರಾಧ್ಯಾಪಕರು. ಇಂಗ್ಲಿಷ್‌ನಿಂದ ಕನ್ನಡಕ್ಕೆ ಹಲವು ಮಹತ್ವದ ಕೃತಿಗಳನ್ನು ಅನುವಾದಿಸಿದ್ದಾರೆ. ಬಹುಭಾಷಿಕತೆ ಮತ್ತು ಅನುವಾದ ಕುರಿತು ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಎರಡು ಪುಸ್ತಕಗಳು ಪ್ರಕಟವಾಗಿವೆ. ಮೂಲತಃ ಚಿತ್ರದುರ್ಗದ ರಾಮಜೋಗಿಹಳ್ಳಿಯವರು.

ಜನರು ಆಕೆಯ ಬಗ್ಗೆ ಹಲವು ದಂತಕತೆಗಳನ್ನು ಹಂಚಿಕೊಳ್ಳುತ್ತಾರೆ.

ಜಾಮಿ ಬರೆದಿರುವ ಐತಿಹ್ಯದ ಪ್ರಕಾರ ರಾಬಿಯಾಳ ಪ್ರೇಮಕ್ಕೆ ಸಿಲುಕಿದ ಬಕ್ತಾಶ್ ಎಲ್ಲ ಗಂಡಸರಂತೆ ಅವಳನ್ನು ಮುಟ್ಟಲು ಹೋದಾಗ – 'ನಮ್ಮ ಪ್ರೇಮ ಅಲ್ಲಾಹುವಿನ ಪ್ರೇಮದಂತೆ ದೈವಿಕವೆಂಬುದು ನಿನಗೆ ಗೊತ್ತಿಲ್ಲವೇನು? ನನ್ನ ಮೈಮುಟ್ಟುವುದು ಅಲ್ಲಾಹನನ್ನು ಮುಟ್ಟುವುದಕ್ಕಿಂತ ಮುಖ್ಯವೇನು?' ಎಂದು ಗದರಿಸಿದಳಂತೆ! ಪ್ರೇಮವನ್ನು ದೈಹಿಕ ಅನುಭವಕ್ಕಿಂತ ದೈವಿಕ ಅನುಭೂತಿ ಎಂದು ಭಾವಿಸಿ ಚೆನ್ನಮಲ್ಲಿಕಾರ್ಜುನನಲ್ಲಿ ಅನುರಕ್ತಳಾದ ಅಕ್ಕ ಹಾಗೂ ರಾಬಿಯಾ ಕಾಲದೇಶಗಳ ಅಂತರಗಳ ಆಚೆಗೂ ಒಂದೇ ರೀತಿಯಾಗಿ ಕಾಣುವುದು ಸೋಜಿಗ.

ಮಗಳ ವಿಶೇಷ ಪ್ರತಿಭೆಯ ಬಗ್ಗೆ ಅರಿವಿದ್ದ ತಂದೆ ರಾಬಿಯಾಳನ್ನು ಬಹಳ ಪ್ರೀತಿಯಿಂದ ನೋಡಿಕೊಳ್ಳಬೇಕು ಎಂದು ತನ್ನ ಮಗನಾದ ಹರೀಸ್‌ನಿಂದ (ಹರೆತ್‌ನಿಂದ) ವಾಗ್ದಾನ ಪಡೆದುಕೊಂಡು ಉಸಿರು ಚೆಲ್ಲಿದ. ಬಕ್ತಾಶ್ ಒಬ್ಬ ಕೇವಲ ಗುಲಾಮ ಎಂದು ತಿಳಿದಿದ್ದರೂ ರಾಬಿಯಾಳ ಪ್ರೇಮ ಕಡಿಮೆಯಾಗಲಿಲ್ಲ. ಅವನ ಪ್ರಾಮಾಣಿಕತೆ, ಸರಳತೆಗಳಿಗೆ ಮಾರುಹೋಗಿದ್ದ ಆಕೆ ಅವನನ್ನು ಕುರಿತು ಅನೇಕ ಕವಿತೆಗಳನ್ನು ಬರೆಯತೊಡಗಿದಳು. ತಾನು ಬರೆಯುವ ಕವಿತೆಗಳು ಭೌತಿಕವಾದ ಎಲ್ಲ ತರತಮಗಳನ್ನು ಸುಲಭವಾಗಿ ಮೀರುವ ಮೀಟುಗೋಲಾಗಿ ಕಾಣಿಸಿದ್ದರಿಂದಲೇ ಆಕೆ ಬಹಳ ತೀವ್ರವಾಗಿ ಬರೆಯತೊಡಗಿದಳು. ರಾಬಿಯಾ ತನ್ನ ಪ್ರೇಮವನ್ನು ಗುಟ್ಟಾಗಿಟ್ಟರೂ ತನ್ನ ಕವಿತೆಗಳನ್ನು ಗುಪ್ತವಾಗಿ ಮುಶಾಯಿರಾ-ಕವಿತೆಗಳ ಕೂಟದಲ್ಲಿ ಹಂಚಿಕೊಳ್ಳತೊಡಗಿದಳು. ರಾಬಿಯಾಳ ಕವಿತೆಗಳ ಆರ್ದ್ರತೆ ಕಾವ್ಯಪ್ರೇಮಿಗಳ ಮನಸ್ಸನ್ನು ತೀವ್ರವಾಗಿ ಪ್ರಭಾವಿಸತೊಡಗಿದವು. ಒಂದು ಉಲ್ಲೇಖದ ಪ್ರಕಾರ, ರಾಬಿಯಾಳ ಸಮಕಾಲೀನನಾದ ಮಹಾಕವಿ ರುಡಾಕಿಗೂ ಸಹ ರಾಬಿಯಾಳ ಕವಿತೆಗಳಿಗೆ ಸಿಗುತ್ತಿರುವ ವಿಶೇಷ ರಸಿಕಸ್ಪಂದನ ಅಸೂಯೆ ಹುಟ್ಟಿಸಿತು ಎಂದು ಹೇಳಲಾಗುತ್ತದೆ. ಗೋಷ್ಠಿಯೊಂದರಲ್ಲಿ ರುಡಾಕಿ ರಾಬಿಯಾಳ ಕವಿತೆಯೊಂದನ್ನು ಎಲ್ಲರೆದುರು ವಾಚಿಸಿದ. ಆ ಕವಿತೆಗಿರುವ ವಿಶೇಷ ಶಕ್ತಿಯಿಂದ ಅಚ್ಚರಿಗೊಂಡ ರಾಜ ಹರೀಸ್, 'ಇದು ಯಾರ ಕವಿತೆ?' ಎಂದು ಕೇಳಿದ. ರಾಬಿಯಾಳ ಜನಪ್ರಿಯತೆಯನ್ನು ಕಂಡು ಈಗಾಗಲೇ ವಿಚಲಿತನಾಗಿದ್ದ ರುಡಾಕಿ ಬೇಕಂತಲೇ ಇದು ರಾಬಿಯಾಳ ಕವಿತೆ ಎಂದು ಕಿವಿಗೆ ತುಂಬಿದ ಎಂಬ ಉಲ್ಲೇಖಗಳು ದೊರೆಯುತ್ತವೆ. ಆಗ ರಾಜ ಹರೀಸ್‌ಗೆ, ರಾಬಿಯಾಳ ಕವಿತೆ ಮಾತ್ರವಲ್ಲ – ಅವಳ ಪ್ರೇಮವೂ ಸಹ ಎಷ್ಟು ಗಟ್ಟಿಯಾದದ್ದು ಎಂಬ ಅರಿವಾಯಿತು.

ಮುಂದೆ ಆಗಿದ್ದನ್ನು ಯಾರಾದರೂ ಊಹಿಸಬಹುದು. ರಾಬಿಯಾಳ ಅಂತ್ಯ ಎಲ್ಲರ ಊಹೆಗಳಿಗೆ ಮೀರಿದ ದುರಂತವಾಗಿದೆ. ರಾಬಿಯಾ ಬದುಕಿದ ಸಮಾಜದಲ್ಲಿ ಹೆಣ್ಣೊಬ್ಬಳು ಕಾವ್ಯವನ್ನು ಬರೆಯುವುದು, ಕಾವ್ಯದಲ್ಲಿ ತನ್ನ ಪ್ರೇಮವನ್ನು ಅರುಹುವುದು, ತನ್ನ ಪ್ರೇಮಕ್ಕಾಗಿ ಗುಲಾಮನನ್ನು ಇಷ್ಟಪಡುವುದು – ಇವೆಲ್ಲವೂ ಒಂದಕ್ಕಿಂತ ಒಂದು ಪರಮ ದ್ರೋಹದ ವಿಷಯಗಳೇ ಆಗಿದ್ದವು. ರಾಜ ಹರೀಸ್ ರಾಬಿಯಾ-ಬಕ್ತಾಶನ ಪ್ರೇಮವನ್ನು ವಿರೋಧಿಸಿ ಬಕ್ತಾಶನನ್ನು ಬಂಧಿಸಿದ. ಬಕ್ತಾಶನನ್ನು ಬಂಧಿಸಿದರೂ ಅವನನ್ನು ಭೇಟಿಯಾಗಲು ಪ್ರಯತ್ನಿಸಿದ ರಾಬಿಯಾಳ ಧೈರ್ಯ ರಾಜನನ್ನು ಕಂಗೆಡಿಸಿತು; ಬಕ್ತಾಶನನ್ನು ಕೊಂದು ಹಾಕಿ, ಅವನು ಸತ್ತ ಸುದ್ದಿ ತಂಗಿಗೆ ಗೊತ್ತಾಗುವಂತೆ ಮಾಡಿದ.

ಪ್ರೇಮಿಯ ಸಾವಿನ ಸುದ್ದಿ ಕೇಳಿ ಬಂಧಿತಳಾಗಿದ್ದ ರಾಬಿಯಾ ತನ್ನ ಸ್ನಾನಗೃಹದಲ್ಲಿ ಮುಂಗೈಯನ್ನು